# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್.ಸಿ. 45/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ನಾಗಮ್ಮ.ಎಸ್ | ಪ್ರಮಾಣ ಮಾಡಿಸಿದ ದಿನಾಂಕಃ | |
| ತಂದೆ/ಗಂಡನ ಹೆಸರು | ಃ ಶ್ರೀ ನಂಜುಂಡಸ್ವಾಮಿ | 24.11.2023 | |
| ವಯಸ್ಸು | ಃ 33 ವರ್ಷ | | |
| ವೃತ್ತಿ | ಃ ಶಿಕ್ಷಕಿ, ಮಾತೃಶ್ರೀ ಸಂಸ್ಕೃತ ಪಾಠಶಾಲೆ, ಕೀಳನಪುರ | ಪ್ರಾ.ಸಾ. | ಃ 15 |
| ವಾಸಸ್ಥಳ | ಃ ಕಮಲವಾಡಿ, ಚಾಮರಾಜನಗರ | ಚಾ.ಸಾ. | ಃ 23 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು ನನ್ನ ಅತ್ತೆ ಮಗನನ್ನು ಸೇರಿಸುವ ಸಲುವಾಗಿ ಅರುಣೋದಯ ವಿದ್ಯಾಸಂಸ್ಥೆಗೆ ಭೇಟಿ ನೀಡಿದ್ದಾಗೆ ನನಗೆ ಆ ಸಂಸ್ಥೆಯ ಕಾರ್ಯದರ್ಶಿ ಪ್ರೇಮಲತಾ ಇವರ ಪರಿಚಯವಾಗಿತ್ತು. ಆ ಪರಿಚಯದ ಮೂಲಕ ನಾನು ಅರುಣೋದಯ ವಿದ್ಯಾಸಂಸ್ಥೆ, ದೇವಲಾಪುರದಲ್ಲಿ ಸಂಸ್ಕೃತ ಶಿಕ್ಷಕಿಯಾಗಿ ಕೆಲಸಕ್ಕೆ ಸೇರಿದ್ದೆ. ನಂತರ ನನ್ನನ್ನು ಮಾತೃಶ್ರೀ ಸಂಸ್ಕೃತ ಪಾಠಶಾಲೆ, ಕೀಳನಪುರಕ್ಕೆ ವರ್ಗಾವಣೆ ಮಾಡಿದ್ದಾರೆ. ಮೊದಲಿನಿಂದಲೂ ನನ್ನ ಬಳಿ *8884240750* ಸಂಖ್ಯೆಯ ಸಿಮ್ ನ ಮೊಬೈಲ್ ಇದೆ. ಈ ಮೊದಲು ನನ್ನ ಬಳಿ ಇನ್ನೊಂದು ಬಿ.ಎಸ್.ಎನ್.ಎಲ್ ಸಿಮ್ ಇದ್ದು ಅದರ ಕೊನೆಯ ಎರಡು ಸಂಖ್ಯೆ ಮಾತ್ರ ನೆನಪಿದೆ. ಆ ಸಿಮ್ ನ ಕೊನೆಯ ಎರಡು ಸಂಖ್ಯೆ *84* ಇದೆ. ಸದರಿ ಸಿಮ್ ಅನ್ನು *2020* ರಲ್ಲಿ ಸಿದ್ದಾರ್ಥ ಲೇಔಟ್ ನ ಬಿ.ಎಸ್.ಎನ್.ಎಲ್ ಕಛೇರಿಯಲ್ಲಿ ಖರೀದಿ ಮಾಡಿದ್ದೆ. ಆ ಸಿಮ್ ನ ನೆಟ್ ವರ್ಕ್ ಮನೆಯಲ್ಲಿ ಸರಿಯಾಗಿ ಸಿಗದೇ ಇದುದ್ದರಿಂದ ಅದನ್ನು ಅರುಣೋದಯ ವಿದ್ಯಾಸಂಸ್ಥೆಯಲ್ಲಿ ಬಳಸುತ್ತಿದ್ದೆ ಮತ್ತು

ಅದನ್ನು ಕಛೇರಿಯಲ್ಲಿ ಇಟ್ಟಿದ್ದೆ. ನಂತರ ನಾನು ಪೋ.ಠಾಣೆಗೆ ಹೋಗಿದ್ದಾಗ ಪೋಲೀಸರು ಆ ಸಿಮ್ ನಮ್ಮ ಬಳಿ ಇದೆ ಎಂದು ಹೇಳಿದ್ದರು. ಆದರೆ ಆ ಸಿಮ್ ಪೋಲೀಸರ ಬಳಿ ಹೇಗೆ ಹೊಗಿತ್ತು ಎಂದು ನನಗೆ ಗೊತ್ತಿಲ್ಲ.

*2.* ಈಗ ನಾನು ನೋಡುತ್ತಿರುವ ***3*** ನೇ ಆರೋಪಿತ ಸಿದ್ದರಾಜು ಇವರು ಅರುಣೋದಯ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಪ್ರೇಮಲತಾ ಇವರ ಗಂಡ ಇದ್ದು ಅವರು ಆಗಾಗ ಮೀಟಿಂಗ್ ಇದ್ದಾಗ ಪ್ರೇಮಲತಾ ಇವರೊಂದಿಗೆ ಶಾಲೆಗೆ ಬರುತ್ತಿದ್ದರು. ***3*** ನೇ ಆರೋಪಿತ ಸಿದ್ದರಾಜು ಇವರು ನನ್ನಿಂದ ಆ ಸಿಮ್ ಅನ್ನು ಪಡೆದುಕೊಂಡಿಲ್ಲ. ಪರಶಿವಮೂರ್ತಿ ಎನ್ನುವವರ ಕೊಲೆ ಆಗಿರುವ ಕಾರಣ ಈ ಪ್ರಕರಣ ದಾಖಲಾಗಿದೆ ಎಂದು ಗೊತ್ತಾಗಿದೆ ಆದರೆ ಯಾರು ಕೊಲೆ ಮಾಡಿದ್ದಾರೆ ಎಂದು ಗೊತ್ತಿಲ್ಲ. ಪೋಲೀಸರ ಮುಂದೆ ಪರಶಿವಮೂರ್ತಿಯವರನ್ನು ಯಾರು ಕೊಲೆ ಮಾಡಿದ್ದಾರೆ ಎಂದು ನನಗೆ ಗೊತ್ತಾದ ಬಗ್ಗೆ ಹೇಳಿಕೆ ಕೊಟ್ಟಿಲ್ಲ. ಈಗ ನಾನು ನೋಡುತ್ತಿರುವ ದಾಖಲೆ ನಾನು ಬಿ.ಎಸ್.ಎನ್.ಎಲ್ ಸಿಮ್ ಪಡೆಯುವ ಕಾಲಕ್ಕೆ ಕೊಟ್ಟಿದ್ದ ಅರ್ಜಿಯ ಪ್ರತಿ ಇದೆ. ಸದರಿ ದಾಖಲೆಯನ್ನು ನಿ.ಪಿ-***69*** ಎಂದು ಗುರುತಿಸಿದೆ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

***3.*** ನಾನು ಮೈಸೂರಿನ ಸಿದ್ಧಾರ್ಥ ಲೇಔಟ್ ನ ಬಿ.ಎಸ್.ಎನ್.ಎಲ್ ಕಛೇರಿಯಲ್ಲಿ ಖರೀದಿ ಮಾಡಿದ್ದ ಸಿಮ್ ಕಾರ್ಡ್ ***8277215884*** ಆಗಿತ್ತು ಎಂದರೆ ನನಗೆ ಸರಿಯಾಗಿ ನೆನಪಿಲ್ಲ. ನಿ.ಪಿ-***69*** ರಲ್ಲಿ ಸಹ ಆ ಮೊಬೈಲ್ ಸಂಖ್ಯೆ ನಮೂದು ಇದೆ ಎಂದರೆ ಇರಬಹುದು. ನಾನು ಸಿದ್ಧಾರ್ಥ ಲೇಔಟ್ ನ ಬಿ.ಎಸ್.ಎನ್.ಎಲ್ ಕಛೇರಿಯಲ್ಲಿ ಖರೀದಿ ಮಾಡಿದ್ದ ಸಿಮ್ ಕಾರ್ಡ್ ಅನ್ನು ಒಂದೆರಡು ವಾರ ಬಳಸಿದ ಬಳಿಕ ಒಮ್ಮೆ ***3*** ನೇ ಆರೋಪಿತ ಸಿದ್ದರಾಜು ಇವರು ನಮ್ಮ ಶಾಲೆಗೆ ಬಂದಾಗ ಆ ಸಿಮ್ ಕಾರ್ಡ್ ನೆಟ್ ವರ್ಕ್ ಸರಿಯಾಗಿ ಸಿಗುತ್ತಿಲ್ಲ ಎಂದು ಹೇಳಿದಾಗ ಅವರು ನಿನ್ನ ಸಿಮ್ ಕಾರ್ಡ್ ಅನ್ನು ಬಿಚ್ಚಿ ಕೊಡಮ್ಮ ನಾನು ನೋಡುತ್ತೇನೆ ಎಂದು ಹೇಳಿ ಪಡೆದುಕೊಂಡು ನಂತರ ಇದುವರೆಗೂ ಅದನ್ನು ವಾಪಸ್ಸು ನೀಡಿಲ್ಲ ಎಂದರೆ ಸರಿಯಲ್ಲ. ***3*** ನೇ ಆರೋಪಿತ ಸಿದ್ದರಾಜು ಮತ್ತು ಅವರ ಸ್ನೇಹಿತರು ಸೇರಿಕೊಂಡು ಪರಶಿವಮೂರ್ತಿಯವರನ್ನು ಕೊಲೆ ಮಾಡಿದ್ದಾರೆ ಎಂದು ಕೇಳಿ ಗೊತ್ತಾಗಿತ್ತು ಎಂದರೆ ಸರಿಯಲ್ಲ. ಈ ಕುರಿತು ನನ್ನ ಹೆಸರಿನಲ್ಲಿ ------- ಗುರುತಿಸುತ್ತೇನೆ ಎಂದು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ-***70*** ಎಂದು ಗುರುತಿಸಿದೆ.

ಪಾಟೀ ಸವಾಲು : 1 ರಿಂದ 5 ನೇ ಆರೋಪಿ ಪರ ವಕೀಲರವರಿಂದಃ- ಇಲ್ಲ

ಮರು ವಿಚಾರಣೆಃ- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*